# ಕಲಿಕೆ–ಶ್ರದ್ಧೆ ಒಂದೇ ನಾಣ್ಯದ ಎರಡು ಮುಖಗಳು

ಒಮ್ಮೆ ಯುವಕನೊಬ್ಬ ಖ್ಯಾತ ಗುರುವಿನೊಬ್ಬನ ಬಳಿಗೆ ಬಂದು 'ನಿಮಗೆ ತಿಳಿದಿರುವ ಎಲ್ಲಾ ವಿದ್ಯೆಗಳಲ್ಲೂ ನಾನು ಪಾರಂಗತನಾಗುವಂತೆ ನನಗೆ ಕಲಿಸಿಕೊಡುವಿರಾ?' ಎಂದು ಕೇಳಿದನು. ಅದಕ್ಕೆ ಆ ಮಹಾಗುರುವು 'ಓಹೋ.. ಆಗಬಹುದು' ಎಂದುತ್ತರಿಸಿದರು. ಆ ಯುವಕನು 'ಅದಕ್ಕೆ ಎಷ್ಟು ಸಮಯ ತಗುಲಬಹುದು?' ಎಂದು ಪ್ರಶ್ನಿಸಿದನು. ತುಸು ಯೋಚಿಸಿದ ಗುರುವು 'ಸುಮಾರು ಇಪ್ಪತ್ತು ವರ್ಷಗಳು' ಎಂದುತ್ತರಿಸಿದರು. ತಕ್ಷಣವೇ ಆ ಯುವಕನು 'ಅದೆಲ್ಲಾ ಸಾಧ್ಯವಿಲ್ಲ, ನನ್ನಲ್ಲಿ ಅಷ್ಟೊಂದು ಸಮಯವಿಲ್ಲ. ಅತೀ ಕಡಿಮೆ ಅವಧಿಯಲ್ಲಿಯೇ ನಾನು ಸಕಲಶಾಸ್ತ್ರ ಪಾರಂಗತನಾಗಬೇಕಿದೆ. ಅತೀ ಕಡಿಮೆ ಎಂದರೆ ಎಷ್ಟು ವರ್ಷ ಬೇಕಾಗಬಹುದು?' ಎಂದು ಮರುಪ್ರಶ್ನಿಸಿದನು. ಆಗ ಸ್ವಲ್ಪವೂ ಯೋಚಿಸದ ಗುರುವು 'ಸುಮಾರು ನಲವತ್ತು ವರ್ಷ ಬೇಕಾಗಬಹುದು' ಎಂದರು.



ಇದೊಂದು ಝೆನ್ ಕತೆ. ಇಲ್ಲಿ ಗುರುವು ಮೊದಲು ಹೇಳಿದ ಸಮಯಕ್ಕಿಂತ ದುಪ್ಪಟ್ಟು ಸಮಯದ ಅವಶ್ಯಕತೆಯಿದೆ ಎಂದು ಹೇಳಲು ಪ್ರಮುಖ ಕಾರಣ, ಕಲಿಯಲು ಬಂದವನಲ್ಲಿ ಶ್ರದ್ಧೆ ಮತ್ತು ಆಸಕ್ತಿಯ ಕೊರತೆ ಇರುವುದರಿಂದ. ಬೇಗ ಕಲಿತು ಅದರ ಬಗ್ಗೆ ಅಹಂ ಹೊಂದುವುದಷ್ಟೇ ಅವನ ಉದ್ದೇಶವಾಗಿದೆಯೇ ಹೊರತು, ಅವನಿಗೆ ಕಲಿಯಬೇಕಾದ ವಿಷಯದ ಬಗ್ಗೆ ಆಸಕ್ತಿಯಾಗಲೀ, ಕಲಿಯುವ ಶ್ರದ್ಧೆಯಾಗಲೀ ಕಿಂಚಿತ್ತೂ ಇಲ್ಲ.

ಇಂದಿನ ಪಾಲಕರೂ ಅಷ್ಟೇ. ತಮ್ಮ ಮಕ್ಕಳು ಬೇಗನೇ ಎಲ್ಲಾ ವಿಷಯವನ್ನೂ ಕಲಿತು ಬಹುಬೇಗ ಎಲ್ಲರಿಗಿಂತ ಬುದ್ಧಿವಂತರೆನಿಸಿಕೊಳ್ಳಬೇಕೆಂದೂ, ಹೆಚ್ಚು ಅಂಕಗಳನ್ನು ಪಡೆಯಬೇಕೆಂದೂ ಬಯಸುತ್ತಾರೆಯೇವಿನಃತಾಳ್ಮೆಹಾಗೂಶ್ರದ್ಧೆಯಿಂದ ಕಲಿತರೆ ಎಲ್ಲಾ ವಿಷಯವೂ ಕರಗತವಾಗಿ, ಜೀವನದಲ್ಲಿ ಕಲಿತದ್ದನ್ನು ಅನ್ವಯಿಸಿಕೊಂಡು ಬಹುಬೇಗ ಪ್ರಬುದ್ಧರಾಗುತಾರೆ ಎಂಬ ಅರಿವೆಯೇ ಹೊಂದಿಲ್ಲದಿರುವುದನ್ನು ಕಾಣಬಹುದು. ಅದಕ್ಕಾಗಿಯೇ ಹಿರಿಯರು ಕಲಿಕೆಯಲ್ಲಿ ಆಸಕ್ತಿ ಬಹುಮುಖ್ಯ ಅಂಶವಾಗಿದ್ದು ಆಸಕ್ತಿಯಿಲ್ಲದೇ ಕಲಿತ ಯಾವುದೂ ಸಿದ್ಧಿಸದೆಂದೂ ಮತ್ತು ಆಸಕ್ತಿಯು ಶ್ರದ್ಧೆಯಿಂದ ಮಾತ್ರ ಗಳಿಸಿಕೊಳ್ಳಬಹುದಾದ ಪ್ರೇರಣಾ ಶಕ್ತಿಯೆಂಬುದನ್ನು ಬಹಳಷ್ಟು ಬಾರಿ ಪುನರುಚ್ಚರಿಸಿದ್ದಾರೆ.

ಮಗುವಿಗೆ ಶ್ರದ್ಧೆಯಿದ್ದಲ್ಲಿ ಕಲಿಕೆ ಸುಲಭಸಾಧ್ಯವೆಂದು ನಾವು ಹೇಳುತ್ತೇವಾದರೂ ಕಲಿಯುವವನಲ್ಲಷ್ಟೇ ಅಲ್ಲದೆ ಕಲಿಸುವ ಗುರುವಿನಲ್ಲೂ ಅಷ್ಟೇ ಪ್ರಮಾಣದ ಶ್ರದ್ಧೆ ಇರಬೇಕಾದುದು ಬಹು ಮುಖ್ಯ. 'ಅರ್ಚಕಸ್ಯ ಪ್ರಭಾವೇನ ಶಿಲಾ ಭವತಿ ಶಂಕರಃ' ಎಂಬ ಋಷಿವಾಣಿಯನ್ನೇ ಉಲ್ಲೇಖಿಸುವುದಾದರೆ, ಶಿಕ್ಷಕರಲ್ಲಿ ಶ್ರದ್ಧೆಯಿದ್ದರೆ ಮಕ್ಕಳಲ್ಲೂ ಅದು ಮಾದರಿಯಾಗಿ ಒಡಮೂಡಿ ಕಲಿಕೆ ಸರಾಗವಾಗುತ್ತದೆ. ಬೋಧಿಸುವಲ್ಲಿನ ಶಿಕ್ಷಕನ ಶ್ರದ್ಧೆಯು ಕಲಿಯುವ ಮಗುವಿನಲ್ಲೂ ಮೂಡಿ ಕಲಿಕೆ ಸುಲಭವಾಗುತ್ತದೆ.

ಬಹುತೇಕ ಶಿಕ್ಷಕರಲ್ಲಿ ಇರುವ ಒಂದು ಗೊಂದಲವೆಂದರೆ 'ನಾವೇನೋ ಶ್ರದ್ಧೆಯನ್ನು ಹೊಂದಿದ್ದೇವೆ. ಆದರೆ ಅದನ್ನು ನಮ್ಮ ಮಕ್ಕಳಲ್ಲಿ ಮೂಡಿಸಲು ನಾವೇನು ಮಾಡಬೇಕು?' ಎಂಬುದಾಗಿದೆ. ಉತ್ತರ ಬಹಳ ಸುಲಭ. ಮೊದಲು ಶಿಕ್ಷಕರಾದ ನಾವು ನಮ್ಮ ಬೋಧನಾ ವಿಷಯದ ಬಗ್ಗೆ ಆಳವಾದ ಜ್ಞಾನ ಹೊಂದಬೇಕಿದ್ದು. ಪೂರಕ ವಿಷಯಗಳ ಬಗ್ಗೆ ಅರಿವುಳ್ಳವರಾಗಿರಬೇಕು. ಕಲಿಯುವ ಹೊಸ ವಿಷಯಾಂಶದ ಬಗ್ಗೆ ಮಗುವಿಗೆ ಸ್ವಲ್ಪ ಅಳುಕಿರುವುದು ಸಹಜ ಪ್ರಕ್ರಿಯೆಯಾಗಿದ್ದು ಮಗುವಿಗೆ ಅದನ್ನು ಬೋಧಿಸುವ ಮೊದಲೇ ವಿಷಯವು ಅದೆಷ್ಟು ಸರಳವೆಂಬುದನ್ನು ತಿಳಿಸಿ ಧೈರ್ಯ ತುಂಬಬೇಕು. ಸಾಧ್ಯವಾದಷ್ಟು ಸರಳೀಕರಣಗೊಳಿಸಿ ಅದನ್ನು ಮಗುವಿಗೆ ತಿಳಿಸಿಕೊಡಬೇಕು. ಕ್ಲಿಷ್ಟ ಕಲಿಕಾಂಶಗಳನ್ನು ಪಟ್ಟಿಮಾಡಿಕೊಂಡು ಅವುಗಳಿಗಾಗಿಯೇ ಹೆಚ್ಚು ಸಮಯ ನಿಗದಿಪಡಿಸಿಕೊಂಡು ಹೆಚ್ಚೆಚ್ಚು ನೈಜ ಉದಾಹರಣೆಗಳ ಮೂಲಕ ಅಭ್ಯಾಸ ಮಾಡಿಸಿರಿ.

ನಮ್ಮ ಬೋಧನಾ ವಿಧಾನವೂ ಸಹ ಮಗುವಿನ ಕಲಿಕಾ ವೇಗಕ್ಕನುಗುಣವಾಗಿರಬೇಕು. ಚಟುವಟಿಕೆಗಳು ಮಗುವಿನ ಮನೋಸಾಮರ್ಥ್ಯದ ಮಟ್ಟದಲ್ಲಿರಬೇಕು. ತರಗತಿಯಲ್ಲಿ ಮಕ್ಕಳ ಆಸಕ್ತಿ ಹೆಚ್ಚಿಸಲು ಮಧ್ಯದಲ್ಲಿ ಕತೆಗಳನ್ನೋ, ಉಪಕತೆಗಳನ್ನೋ, ನಗೆಹನಿಗಳನ್ನೋ (ಮಕ್ಕಳ ಅಭಿರುಚಿಗೆ ತಕ್ಕಂತೆ, ಅಶ್ಲೀಲವಾಗಿಲ್ಲದ) ಹೇಳುತ್ತಿರಿ. ಶಿಕ್ಷಕ ಹಾಗೂ ಮಗುವಿನ ಮಧ್ಯೆ ಸಾಕಷ್ಟು ಮಾತುಕತೆ ಹಾಗೂ ಚರ್ಚೆಗೆ ಅವಕಾಶಗಳಿರಬೇಕು. ಲವಲವಿಕೆಯ ವಾತಾವರಣ ನಿಮ್ಮ ವರ್ಗದ್ದಾಗಿರಬೇಕು. ಹಾಗೆಂದು ಇವೆಲ್ಲಾ ಉತ್ತೇಜಕಗಳು ಊಟದಲ್ಲಿನ ಉಪ್ಪಿನಕಾಯಿಯಂತಿರಬೇಕೇ ವಿನಃ ಅವೇ ಊಟವಾಗಬಾರದು.

ಇವೆಲ್ಲವೂ ಇದ್ದರೆ ಮಗು ನಿಮ್ಮನ್ನು ತುಂಬಾ ಇಷ್ಟಪಡಲು ಪ್ರಾರಂಭಿಸುತ್ತದೆ. ಆಗ ನಿಮ್ಮ ಬೋಧನಾ ವಿಷಯದ ಬಗ್ಗೆ ಆಸಕ್ತಿಯೂ ಹೆಚ್ಚುವುದು. ಆಸಕ್ತಿಯು ಶ್ರದ್ಧೆಯಾಗಿ ಪರಿವರ್ತನೆಹೊಂದಿ ಕಲಿಕೆ ಸರಾಗವಾಗಿ ಶೈಕ್ಷಣಿಕ ಪ್ರಗತಿ ಉಂಟಾಗುತ್ತದೆ. ಶಿಕ್ಷಕರಾದವರು ಮಗುವಿನ ಆಸಕ್ತಿ ಹೆಚ್ಚಿಸಿದಲ್ಲಿ ಶ್ರದ್ಧೆಯು ತಾನಾಗೇ ಒಡಮೂಡಬಲ್ಲದು ಅದಕ್ಕಾಗಿ ಸಾಧ್ಯವಾದಷ್ಟೂ ಸಾಂಪ್ರದಾಯಿಕ ಬೋಧನಾ ವಿಧಾನಗಳನ್ನಾಗಲೀ ಅಥವಾ ಚಟುವಟಿಕೆಗಳನ್ನಾಗಲೀ ಬಳಸದೇ ಹೊಸಹೊಸ ಸೃಜನಾತ್ಮಕತೆಯನ್ನು ಮೈಗೂಡಿಸಿಕೊಂಡು ಮಕ್ಕಳಲ್ಲಿ ಶ್ರದ್ಧೆಯನ್ನುಂಟು ಮಾಡಿ ಕಲಿಕೆಯು ಪ್ರಗತಿಯಾಗುವಂತೆ ಮಾಡಬೇಕಾದದ್ದು ಅತ್ಯವಶ್ಯ. ಒಟ್ಟನಲ್ಲಿ ಹೇಳುವುದಾದರೆ ಶ್ರದ್ಧೆಯಿಲ್ಲದೇ ಯಾವ ವಿಷಯದ ಕಲಿಕೆಯೂ ಪರಿಪೂರ್ಣ ಕಲಿಕೆಯಾಗಲಾರದು. ಆಸಕ್ತಿ ಹಾಗೂ ತಾಳ್ಮೆಯಷ್ಟೇ ಶ್ರದ್ಧೆಯೂ ಅತೀ ಮುಖ್ಯವಾದ ಅಂಶವಾಗಿದೆ. ಶಿಕ್ಷಕರ ದಿನದ ಈ ಸಂದರ್ಭದಲ್ಲಿ ಮಕ್ಕಳು ಶಿಕ್ಷಕರು ಪರಸ್ಪರ ಹೊಂದಾಣಿಕೆಯಿಂದ ವರ್ತಿಸಿದರೆ ಮಕ್ಕಳ ಭವಿಷ್ಯ ಹಸನಾಗಬಲ್ಲದು.

■ **ಪ.ನಾ. ಹಳ್ಳಿ. ಹರೀಶ್ ಕುಮಾರ್**